No. of Printed Pages : 3

**FKD-01**

01625

# Foundation Course : KANNADA

## Term-End Examination

## December, 2010

## Course Code : FKD-01

*Time : 2 hours* *Maximum Marks : 50*

---

1. ಈ ಕೆಳಕಂಡ 4 (ನಾಲ್ಕು) ಪ್ರಶ್ನೆಗಳಲ್ಲಿ ಯಾವುದಾದರೂ 2 (ಎರಡು) ಪ್ರಶ್ನೆಗಳಿಗೆ ಉತ್ತರಿಸಿರಿ : **2x10=20**

   (a) 'ಸಮಾಸ' ಎಂದರೇನು ? ಸಮಾಸಗಳನ್ನು ಉದಾಹರಣೆ ಸಹಿತ ವಿವರಿಸಿರಿ.

   (b) ಸಂಸ್ಕೃತಿ ಎಂದರೇನು ? ಸಂಸ್ಕೃತಿಯನ್ನು ಕುರಿತು ವಿದ್ವಾಂಸರು ನೀಡಿದ ವ್ಯಾಖ್ಯೆಗಳನ್ನು ಚರ್ಚಿಸಿರಿ.

   (c) 'ಧರ್ಮವೇ ಜಯವೆಂಬ ದಿವ್ಯಮಂತ್ರ' ದಲ್ಲಿ ಪುರಂದರದಾಸರ ಜೀವನ ಧೋರಣೆ ಹೇಗೆ ವ್ಯಕ್ತವಾಗಿದೆ ? ಸೋದಾಹರಣವಾಗಿ ವಿವರಿಸಿರಿ.

   (d) ಸಂಪಾದಕೀಯ ಲೇಖನದ ಸ್ವರೂಪವನ್ನು ಬಣ್ಣಿಸಿ ಅದರ ಮೂರು ಮಹತ್ವದ ಪ್ರಕಾರಗಳನ್ನು ವಿವರಿಸಿರಿ.

2. ಈ ಕೆಳಕಂಡ ಪ್ರಶ್ನೆಗಳಲ್ಲಿ ಯಾವುದಾದರೂ 3 **(ಮೂರು)** ಪ್ರಶ್ನೆಗಳಿಗೆ ಉತ್ತರಿಸಿರಿ : **3x5=15**

(a) ಸಂಧಿ ಎಂದರೇನು ? ಕನ್ನಡದಲ್ಲಿ ಬಳಕೆಯಾಗುವ ಸಂಸ್ಕೃತ ಸಂಧಿಗಳನ್ನು ಉದಾಹರಣೆ ಸಹಿತ ವಿವರಿಸಿರಿ.

(b) 'ಸಮಾಜಸೇವೆ' ಎಂದರೇನು ? ಸಾಮಾಜಿಕ ಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ಸಾಮಾಜಿಕ ಕಾರ್ಯಕರ್ತರು ಹೇಗೆ ನೆರವಾಗುತ್ತಾರೆ ? ವಿವರಿಸಿರಿ.

(c) ಪಂಪಾಯಾತ್ರೆಯಲ್ಲಿ ಹಾಳು ಹಂಪೆಯ ದರ್ಶನವನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ ?

(d) ಮಾವನ ಮನೆಯಲ್ಲಿ, ಕುರುಡು ಕಾಂಚಾಣ – ಇವುಗಳಲ್ಲಿ ಯಾವುದಾದರೂ ಒಂದು ಕವಿತೆಯ ವಸ್ತು ವಿಶೇಷವನ್ನು ಕುರಿತು ಬರೆಯಿರಿ.

(e) ಈ ಕೆಳಗಿನ ವಿಷಯಗಳಲ್ಲಿ **ಒಂದನ್ನು** ಕುರಿತು ನಿಮ್ಮ ಅಭಿಪ್ರಾಯಗಳನ್ನು ಅಗ್ರಲೇಖನದ ರೂಪದಲ್ಲಿ ಬರೆಯಿರಿ :

(i) ಪ್ರಾದೇಶಿಕ ರಾಜಕೀಯ ಪಕ್ಷಗಳು

(ii) ಸ್ತ್ರೀ ಸಮಾನತೆ

3. ಈ ಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ : **5**

Spring the sweet is the years' pleasant King
Then blooms each thing then maids dance in a ring
Cold doth not sting, the petty birds do sing
Cuckoo, jug-jug pu-we, to witta-wo.

4. (a) ಕೆಳಗಿನ ಪದಗಳ ಲಿಂಗಗಳನ್ನು ಗುರುತಿಸಿರಿ : 2

(i) ವಸಂತಾ

(ii) ಕುಂಟ

(iii) ಬೆಕ್ಕು

(iv) ಮರ

(b) ಕೆಳಗಿನ ವಾಕ್ಯಗಳನ್ನು ಮುಂದೆ ಸೂಚಿಸಿದಂತೆ ಬದಲಾಯಿಸಿ : 2

(i) ರಾಮನು ಊರಿಗೆ ಹೋಗುತ್ತಾನೆ – ಭೂತಕಾಲ

(ii) ನಿನ್ನೆಯೇ ಬಂದೆ – ಭವಿಷ್ಯತ್‌ಕಾಲ

(c) ಕೆಳಗಿನ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಬಳಸಿರಿ : 2

(i) ಬೆನ್ನು ಹತ್ತು

(ii) ಗುದಮುರಿಗಿ ಹಾಕು

(d) ಬಿಟ್ಟ ಸ್ಥಳಗಳಲ್ಲಿ ಸೂಕ್ತ ಪದಗಳನ್ನು ತುಂಬಿರಿ : 4

(i) ಕುವೆಂಪು ಅವರ ಪೂರ್ಣ ಹೆಸರು __________ .

(ii) ದೇವಲೋಕ ಮರ್ತ್ಯಲೋಕ ವೆಂಬುದು __________ .

(iii) ಧರ್ಮವೇ ಜಯವೆಂಬ __________ .

(iv) ಕುರುಡು ಕಾಂಚಾಣ __________ .

---